ಸುವ ಕೆಲಸ ಮಾಡುತ್ತೇನೆ.ಆಮೇಲೆ, ಆ ಭಾಗದ ಎಲ್ಲಾ ಶಾಸಕರನ್ನೂ ಕರೆದು presentation ಅನ್ನೂ ಕೂಡ ನಾವು ಕೊಡುತ್ತೇವೆ. ಇಲ್ಲಿ ನಾವು Lider technology ಯನ್ನು use ಮಾಡಿ survey ಮಾಡುತ್ತಿದ್ದೇವೆ. ಅದು ಮುಂದುವರಿಯುತ್ತದೆ. Lider technology ಮೂಲಕ survey ಆಗುವುದರಿಂದ ಬಹಳ ತ್ವರಿತಗತಿಯಲ್ಲಿ ಆಗುತ್ತದೆ. ಏಕೆಂದರೆ, Laser beam ಒಂದು ಸಾರಿ ಬಿದ್ದರೆ ಈ ಕಡೆ ೫೦೦ ಮೀಟರ್, ಆ ಕಡೆ ೫೦೦ ಮೀಟರ್ ಬೀಳುತ್ತದೆ.ಪ್ರತಿಯೊಂದು ಕಣದ ಮೇಲೆ ಒಂದು ಲಕ್ಷ laser beam ಬೀಳುತ್ತದೆ. ಅದನ್ನು ನಾವು map ನಲ್ಲಿ convert ಮಾಡುತ್ತೇವೆ. ಅತ್ಯಂತ ಆಧುನಿಕವಾದ technology ಯನ್ನು ನಾವು ಬಳಕೆ ಮಾಡುತ್ತಿದ್ದೇವೆ.ಆದ್ದರಿಂದ ಬಹಳ ಬೇಗ ಆಗುತ್ತದೆ. ಅದರಲ್ಲಿ ಎರಡು ವಿಚಾರಗಳಿವೆ.ಪಶ್ಚಿಮ ಭಾಗದಿಂದ ಬರುವ ನೀರನ್ನುಬಯಲುಸೀಮೆಗೆ ಕೊಡುವುದಕ್ಕೆ ನಾವು ಬದ್ಧರಾಗಿದ್ದೇವೆ. ಆ ನಿಟ್ಟಿನಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಏನೇ challenge ಬಂದರೂ ಅದನ್ನು ಎದುರಿಸಿ ನೀರು ಕೊಡುವುದಕ್ಕೆ ನಾವು ಎಲ್ಲಾ ಕಾರ್ಯಗಳನ್ನು ಪ್ರಾರಂಭ ಮಾಡಿದ್ದೇವೆ.

ಅಧ್ಯಕ್ಷರು:- ಸಾಕು. ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡೋಣ.

ಶ್ರೀ ಬಸವರಾಜ ಬೊಮ್ಮಾಯಿ:- ಧನ್ಯವಾದಗಳು.

5. ವಿಷಯ: ರಾಜ್ಯದ ೩ ಕರಾವಳಿ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖಿಯಾಗಿ ಹರಿಯುವ ಪ್ರಮುಖವಾದ ೧೩ ನದಿಗಳೂ ಮತ್ತು ಉಪನದಿಗಳ ನೀರನ್ನು ಕುಡಿಯುವ ನೀರಿನ ವ್ಯವಸ್ಥೆ, ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ಸದ್ಬಳಕೆ ಮಾಡಲು ಸೌಭಾಗ್ಯ ಸಂಜೀವಿನಿ ಮತ್ತು ಪಶ್ಚಿಮವಾಹಿನಿ ಯೋಜನೆಗಳನ್ನು ಜಾರಿಗೊಳಿಸುವ ಬಗ್ಗೆ.

ಶ್ರೀಎನ್. ಯೋಗೀಶ್ ಭಟ್ (ಉಪ ಸಭಾಧ್ಯಕ್ಷರು) :- ಮಾನ್ಯ ಅಧ್ಯಕ್ಷರೆ,ರಾಜ್ಯದ ೩ ಕರಾವಳಿ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖಿಯಾಗಿ ಹರಿಯುವ

ಪ್ರಮುಖವಾದ ೧೩ ನದಿಗಳೂ ಮತ್ತು ಉಪನದಿಗಳ ನೀರನ್ನು ಕುಡಿಯುವ ನೀರಿನ ವ್ಯವಸ್ಥೆ, ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ಸದ್ಬಳಕೆ ಮಾಡಲು ಸೌಭಾಗ್ಯ ಸಂಜೀವಿನಿ ಮತ್ತು ಪಶ್ಚಿಮವಾಹಿನಿ ಯೋಜನೆಗಳನ್ನು ಜಾರಿಗೊಳಿಸುವ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು):- ಮಾನ್ಯ ಅಧ್ಯಕ್ಷರೆ,

ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ನದಿಗಳ ಅಂತರ್ ಜೋಡಣೆ ಕುರಿತಂತೆ, ಸನ್ಮಾನ್ಯ ಮಾಜಿ ಶಾಸಕರಾದ ಶ್ರೀ.ಎ.ಜಿ.ಕೊಡ್ಗಿ, ಇವರು, "ಸೌಭಾಗ್ಯ ಸಂಜೀವಿನಿ ಯೋಜನೆ"ಯಲ್ಲಿ ಪಶ್ಚಿಮಘಟ್ಟದ ಇಳಿಜಾರಿನಲ್ಲಿ ಹದಿಮೂರು ನದಿಗಳನ್ನು ಕಾಲುವೆಯ ಮೂಲಕ ಜೋಡಿಸಲು ಪ್ರಸ್ತಾಪಿಸಿರುತ್ತಾರೆ. ಸದರಿ ಕಾಲುವೆಯಲ್ಲಿ ಸಂಗ್ರಹವಾಗುವ ನೀರನ್ನು ಪ್ರವಾಹ ನಿಯಂತ್ರಣಾ, ಕುಡಿಯುವ ನೀರು, ನೀರಾವರಿ, ಪ್ರವಾಸೋದ್ಯಮ, ಮೀನುಗಾರಿಕೆ ಅಭಿವೃದ್ಧಿ ಹಾಗೂ ಜಲವಿದ್ಯುತ್ ಉತ್ಪಾದನೆಗಾಗಿ ಬಳಸಲು ಪ್ರಸ್ತಾಪಿಸಲಾಗಿದೆ.

ಸೌಭಾಗ್ಯ ಸಂಜೀವಿನಿ ಪ್ರಸ್ತಾವನೆಯನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ಶ್ರೀ ಕೆ.ಸಿ.ರೆಡ್ಡಿ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:17.11.2003ರಲ್ಲಿ ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಸೌಭಾಗ್ಯ ಸಂಜೀವಿನಿ ಯೋಜನೆಯನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ, 30 ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ದಿನಾಂಕ: 14.09.2007ರಲ್ಲಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ತಜ್ಞರ ಸಮಿತಿಯ ವರದಿಯನ್ನು ಸರ್ಕಾರದ ಆದೇಶ ಸಂಖ್ಯೆ: ಜಸಂಇ 205 ವಿಬ್ಯಾಇ 2003, ದಿನಾಂಕ:05.08.2008ರ ಮೂಲಕ ಒಪ್ಪಿ, ವಿವರವಾದ ಯೋಜನಾ ವರದಿ ತಯಾರಾದ ನಂತರ ಆರ್ಥಿಕ ಸಂಪನ್ಮೂಲದ ಲಭ್ಯತೆಯ ಮೇರೆಗೆ ಯೋಜನೆಯ ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಹಂತಹಂತವಾಗಿ ಕೈಗೊಳ್ಳಲು ಅನುಮೋದನೆ ನೀಡಿತ್ತು.

ತದನಂತರ, ಸರ್ಕಾರದ ಆದೇಶ ಸಂಖ್ಯೆ: ಜಸಂಇ 29 ವಿಬ್ಯಾಇ 2009, ದಿನಾಂಕ:05.06.2009ರಲ್ಲಿ ಉದ್ದೇಶಿತ ಸೌಭಾಗ್ಯ ಸಂಜೀವಿನಿ ಯೋಜನೆ ಕುರಿತು ಟೆಂಡರನ್ನು ಕರೆದು, ವಿವರವಾದ ಯೋಜನಾ ವರದಿಯನ್ನು ತಯಾರಿಸಿಕೊಳ್ಳಲು ಮತ್ತು ಕಾಮಗಾರಿಗಳನ್ನು ಕೈಗೊಳ್ಳಲು ಈ ಯೋಜನೆಯನ್ನು ಪಶ್ಚಿಮಘಟ್ಟ ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿತ್ತು.

ಶ್ರೀ ಎ.ಜಿ.ಕೊಡ್ಗಿ, ಅಧ್ಯಕ್ಷರು, 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಅನುಷ್ಠಾನ ಪಡೆ, ಇವರು ಪಶ್ಚಿಮಘಟ್ಟ/ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವಯೋಜನೆಗೆ ಅನುಕೂಲವಾಗುವಂತೆ, ಹಣಕಾಸಿನ ವ್ಯವಸ್ಥೆಯಾಗಲೀ, ಅಗತ್ಯವಿರುವ ಸಿಬ್ಬಂದಿಗಳಾಗಲೀ,ಇಲ್ಲದಿರುವುದರಿಂದ, ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವುದು ಸಾಧ್ಯವಾಗಲಾರದೆಂದು ಅಭಿಪ್ರಾಯ ಪಡುತ್ತಾ, ಸೌಭಾಗ್ಯ ಸಂಜೀವಿನಿ ಯೋಜನೆಯನ್ನು ಸದರಿ ಪ್ರಾಧಿಕಾರದಿಂದ ಮತ್ತೆ ಜಲಸಂಪನ್ಮೂಲ ಇಲಾಖೆಗೆ ವರ್ಗಾಯಿಸುವಂತೆ ಪ್ರಸ್ತಾಪಿಸಿದ್ದರು.

ಅದರಂತೆ, ಯೋಜನಾ ಇಲಾಖೆಯು ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಪಿಡಿ 66 ಪಿಟಿಪಿ 2011(1), ದಿನಾಂಕ:04.01.2011ರಲ್ಲಿ ಸೌಭಾಗ್ಯ ಸಂಜೀವಿನಿ ಯೋಜನೆಯ ಅನುಷ್ಠಾನವನ್ನು ಪುನಃ ಜಲಸಂಪನ್ಮೂಲ ಇಲಾಖೆಗೆ ವರ್ಗಾಯಿಸಿರುತ್ತದೆ. ಇದಲ್ಲದೆ, ಕೃಷಿ ಆಯವ್ಯಯ 2012–13 ರಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಜೋಡಣೆ ಸೌಭಾಗ್ಯ ಸಂಜೀವಿನಿ ಯೋಜನೆ ಕೈಗೊಳ್ಳಲು ಉದ್ದೇಶಿಸಿದ್ದು, ಇದರಿಂದ ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯ ಕುಡಿಯುವ ನೀರು, ನೀರಾವರಿ, ಮೀನುಗಾರಿಕೆ, ನೆರೆ ನಿಯಂತ್ರಣ ಹಾಗೂ ವಿದ್ಯುತ್ ಉತ್ಪಾದನೆಗೆ ಪೂರಕವಾಗಲಿದೆಯೆಂದು ಪ್ರಸ್ತಾಪಿಸಲಾಗಿದೆ.

ಈ ಯೋಜನೆಯನ್ನು ಪರಿಣಾಮಕಾರಿ ಹಾಗೂ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ದಿನಾಂಕ 20.11.2012 ರಂದು ಸನ್ಮಾನ್ಯ ಜಲ ಸಂಪನ್ಮೂಲ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಘನಾನ್ಯ ಉಪ ಸಭಾಧ್ಯಕ್ಷರಾದ ಶ್ರೀ.ಎನ್.ಯೋಗೀಶ್ ಭಟ್ ರವರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ, ಉದ್ದೇಶಿತ ಸೌಭಾಗ್ಯ ಸಂಜೀವಿನಿ ಯೋಜನೆಯ ಅನುಷ್ಠಾನದ ಬಗ್ಗೆ ಸಣ್ಣ ನೀರಾವರಿ ಇಲಾಖೆ ಮತ್ತು ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ರವರುಗಳ ಸಹಯೋಗದೊಂದಿಗೆ ಸೌಭಾಗ್ಯ ಸಂಜೀವಿನಿ ಯೋಜನೆಯ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಮತ್ತು ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಪಡೆಯುವ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲು ಕರ್ನಾಟಕ ನೀರಾವರಿ ನಿಗಮಕ್ಕೆ ನಿರ್ದೇಶಿಸಲಾಗಿದ್ದು, ಸರ್ಕಾರದ ನಿರ್ದೇಶನದನ್ವಯ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲು ವ್ಯವಸ್ಥಾಪಕ ನಿರ್ದೇಶಕರು ರವರು ಮುಖ್ಯ ಇಂಜಿನಿಯರ್, ವಾರಾಹಿ ಯೋಜನಾ ವಲಯ, ಸಿದ್ಧಾಪುರ ಇವರಿಗೆ ಸೂಚಿಸಿರುತ್ತಾರೆ.

ಪಶ್ಚಿಮ ವಾಹಿನಿ ಯೋಜನೆಯ ಬಗ್ಗೆ ಸಣ್ಣ ನೀರಾವರಿ ಇಲಾಖೆಯು ಸಲ್ಲಿಸಿರುವ ಉತ್ತರ

ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಗೆ ಅಡ್ಡಲಾಗಿ ಅಲ್ಲಲ್ಲಿ ಹೊಸ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸಿ ನೀರಾವರಿ ಸೌಲಭ್ಯಗಳನ್ನು ಕಲ್ಪಿಸುವ ಯೋಜನೆಗೆ ರೂ.712.70 ಕೋಟಿ ಮೊತ್ತದ ಪ್ರಸ್ತಾಪವಿದೆ. ಸದರಿ ಪ್ರಸ್ತಾವನೆಯಲ್ಲಿ ಕಿಂಡಿ ಅಣೆಕಟ್ಟು/ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ಮತ್ತು ನದಿ/ತೋಡುಗಳ ದಂಡೆ ಸಂರಕ್ಷಣೆ ಕಾಮಗಾರಿಗಳು ಒಳಗೊಂಡಿರುತ್ತದೆ.

ಈ ಯೋಜನೆಯ 867 ಕಾಮಗಾರಿಗಳನ್ನು ಕಾರ್ಯಗತಗೊಳಿಸು–ವುದರಿಂದ ಬಳಸಿಕೊಳ್ಳಲಾಗದೇ ಹರಿದು ಸಮುದ್ರವನ್ನು ಸೇರುವ ನೀರನ್ನು ಭಾಗಶಃ ನೀರಾವರಿಗಾಗಿ ಉಪಯೋಗಿಸಿ ಕೊಳ್ಳಬಹುದಾಗಿರುತ್ತದೆ. ಸದರಿ ಯೋಜನೆಯಿಂದ ಸುಮಾರು 26835.30 ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಬಹುದು. ಕರಾವಳಿ ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ನದಿಯ ನೀರಿನ ಮಟ್ಟ ಕುಸಿಯುವುದರಿಂದ ಉಪ್ಪು ನೀರು ಸಿಹಿ ನೀರಿನೊಂದಿಗೆ ಬೆರೆತು ಕುಡಿಯುವ ನೀರಿನ ಸಮಸ್ಯೆಯನ್ನು ಈ ಪ್ರದೇಶದ ಜನರು ಎದುರಿಸಬೇಕಾಗಿದೆ. ಈ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಪಶ್ಚಿಮಾಭಿಮುಖವಾಗಿ ಹರಿದು ಸಮುದ್ರ ಸೇರುವ ನದಿಗಳು ಹಾಗೂ ಉಪ ನದಿಗಳಿಗೆ ಅಡ್ಡಲಾಗಿ ಉಪ್ಪು ನೀರು ತಡೆ ಅಣೆಕಟ್ಟುಗಳನ್ನು ನಿರ್ಮಿಸುವುದರಿಂದಅಂತರ್ಜಲ ಮಟ್ಟ ಏರುವುದಕ್ಕೂ ಸಹಾಯವಾಗುವುದರಿಂದ ಕೊಳವೆ ಬಾವಿ, ತೆರೆದ ಬಾವಿಗಳಲ್ಲಿ ನೀರಿನ ಸಂಗ್ರಹಣಾ ಮಟ್ಟ ಹೆಚ್ಚಿ ಜನರ ನೀರಿನ ಸಮಸ್ಯೆ ನಿವಾರಿಸಲು ಸಹಕಾರಿಯಾಗುತ್ತದೆ. ಸದರಿ ಕಿಂಡಿ ಅಣೆಕಟ್ಟುಗಳ ನಿರ್ಮಾಣದಿಂದ 9.599 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.

ಈ ಪ್ರಸ್ತಾವನೆಯನ್ನು ಎ.ಐ.ಬಿ.ಪಿ AIBP ಯೋಜನೆಯಡಿ ಕೈಗೆತ್ತಿಕೊಳ್ಳಲು ಕೇಂದ್ರ ಸರ್ಕಾರದ ಅನುಮೋದನೆ ಕೋರಲಾಗಿತ್ತು. ಆದರೆ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಬರಪೀಡಿತ ಪ್ರದೇಶಗಳ DPAR/Tribal Areaಅಡಿಯಲ್ಲಿ ಬರದೇ ಇರುವುದರಿಂದ ಸದರಿ ಜಿಲ್ಲೆಗಳ ಕಾಮಗಾರಿಗಳಿಗೆ ಎ.ಐ.ಬಿ.ಪಿ AIBP ಮಾರ್ಗಸೂಚಿಯಲ್ಲಿ ವಿನಾಯತಿ ನೀಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದೆ.

2011–12ನೇ ಸಾಲಿನ ಕೃಷಿ ಆಯವ್ಯಯದಲ್ಲಿ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಮುದ್ರಕ್ಕೆ ಹರಿದು ಹೋಗುವ ನೀರನ್ನು ತಡೆದು ರೈತರು ನೀರಾವರಿಗೆ ಉಪಯೋಗಿಸಲು ಅನುಕೂಲವಾಗುವಂತೆ ಕಿಂಡಿ ಅಣೆಕಟ್ಟು ಹಾಗೂ ಚೆಕ್ ಡ್ಯಾಂಗಳ ನಿರ್ಮಾಣಕ್ಕೆ ರೂ.30.00 ಕೋಟಿಗಳ ಅನುದಾನವನ್ನು ಒದಗಿಸಲಾಗಿತ್ತು. 2012–13ನೇ

ಸಾಲಿನ ಆಯವ್ಯಯದಲ್ಲಿ ಈ ಕಾರ್ಯಕ್ಕಾಗಿ 50.00 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ. ಈ ರೀತಿ ಇಲಾಖೆಯಲ್ಲಿ ಲಭ್ಯವಾಗುತ್ತಿರುವ ಅನುದಾನದಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿ/ಉಪನದಿಗಳಿಗೆ ಅಡ್ಡಲಾಗಿ ಅವಶ್ಯವಿರುವ ಸ್ಥಳಗಳಲ್ಲಿ ಕಿಂಡಿ/ಉಪ್ಪುನೀರು ತಡೆ ಅಣೆಕಟ್ಟುಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎನ್. ಯೋಗೀಶ್ ಭಟ್(ಉಪ ಸಭಾಧ್ಯಕ್ಷರು):-ಮಾನ್ಯ ಅಧ್ಯಕ್ಷರೆ, ಈಗಾಗಲೇ ಸುದೀರ್ಘವಾದಚರ್ಚೆಯಾಗಿದೆ.ಅದಕ್ಕೆ ಪೂರಕವಾಗಿರುವ ಅಂಶಗಳು ಪಶ್ಚಿಮವಾಹಿನಿಗೆ ಸಂಬಂಧಪಟ್ಟಂಥವು ಇವೆ. ೩ ಕರಾವಳಿ ಜಿಲ್ಲೆಗಳಲ್ಲಿ ಕೂಡ ಸಮೃದ್ಧವಾದ ನಿಟ್ಟಿನಲ್ಲಿ ಸುಮಾರು ೨೪ ಪ್ರಮುಖ ನದಿಗಳು ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ, ಕುಮಾರಧಾರಾ, ಶಾಂಭವಿ, ಪಲ್ಗುಣಿ, ನಂದಿನಿ, ಗಾರಿಹೊಳೆ, ಶಿರಿಯಾಹೊಳೆ ಇವೆ. ಅದೇರೀತಿ, ಉಡುಪಿ ಜಿಲ್ಲೆಗಳ ಪ್ರಮುಖ ನದಿಗಳಾದ ಸುಂಕದಹುಂಡಿ ಹೊಳೆ, ಎಡೆಮಾರನಹೊಳೆ, ಬೈಂದೂರು ಹೊಳೆ, ವರಾಹಿ, ಚಕ್ರ, ಕೊಲ್ಲೂರು, ಸೀತಾ,ಸ್ವರ್ಣ, ಉದ್ಯಾವರ, ಮಣಿಪಾಲ, ಶಾಂಭವಿ ಹೀಗೆ ೧೨ ನದಿಗಳಿವೆ. ಉತ್ತರಕನ್ನಡ ಜಿಲ್ಲೆಯ ಪ್ರಮುಖ ನದಿಗಳಾದ ಕಾಳಿ, ಬೇಡ್ತಿ, ಅಘನಾಶಿನಿ, ಶರಾವತಿ ಮತ್ತು ವೆಂಕಟಾಪುರ ನದಿಗಳಿವೆ. ಪಶ್ಚಿಮಾಭಿಮುಖವಾಗಿ ಹರಿದುಹೋಗುವಂಥ ಈ ನದಿಗಳಲ್ಲಿ assess ಮಾಡಿದರೆ ೧೪೮೨ ಟಿಎಂಸಿಯಷ್ಟು ನೀರು ಸಮುದ್ರಕ್ಕೆ ಹರಿದು ಹೋಗುತ್ತಿದೆ. ಬಹುಶ: ಇದಕ್ಕೆ ಸಂಬಂಧಪಟ್ಟಂತೆ ಕಳೆದ ಹಲವು ವರ್ಷಗಳಿಂದ ಬೇರೆ ಬೇರೆ ರೀತಿಯಲ್ಲಿ ಸರ್ಕಾರದ ಗಮನಸೆಳೆಯುವ ಪ್ರಯತ್ನ ಮಾಡುತ್ತಿದ್ದೇವೆ.ನಾವು ಅಧ್ಯಕ್ಷರ ಮೂಲಕ ಮನವಿ ಮಾಡುವುದೇನೆಂದರೆ, ಕುಡಿಯುವ ನೀರಿನ ವ್ಯವಸ್ಥೆ, ವ್ಯವಸಾಯಕ್ಕೆ ಬೇಕಾದಂಥ ಮತ್ತುಕೈಗಾರಿಕೆಗೆ ಸಂಬಂಧಪಟ್ಟಂಥ ಹಾಗೂ ೩ ಕರಾವಳಿ ಜಿಲ್ಲೆಗಳಲ್ಲಿ ಸಮೃದ್ಧ ಜೀವನ ನಡೆಸಲುಬೇಕಾಗುವಂಥ ವ್ಯವಸ್ಥೆ ಮಾಡುವಂಥ ನಿಟ್ಟಿನಲ್ಲಿ ಸೌಭಾಗ್ಯಸಂಜೀವಿನಿ ಯೋಜನೆ ಮತ್ತು ಪಶ್ಚಿಮವಾಹಿನಿ ಯೋಜನೆಯನ್ನು ತಕ್ಷಣ ಅನುಷ್ಠಾನಕ್ಕೆ ತರುವಂಥ ನಿಟ್ಟಿನಲ್ಲಿ ಇಲ್ಲಿ ಯಾವುದೇ

major irrigation projects ನಮ್ಮ ಜಿಲ್ಲೆಯಲ್ಲಿ ಇಲ್ಲದೇ ಇರುವುದರಿಂದ ಖಂಡಿತವಾಗಿ ಬೃಹತ್ ನಿರಾವರಿ ಯೋಜನೆಯನ್ನು ಆದ್ಯತೆ ಮೇರೆಗೆ ಕಾರ್ಯರೂಪಕ್ಕೆ ತರುವಂಥದ್ದು ಮತ್ತು ಎರಡುವರ್ಷಗಳಲ್ಲಿ ಕಾರ್ಯರೂಪಕ್ಕೆ ತರುವಂಥ ನಿಟ್ಟಿನಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ:- ಈ ಹಿಂದೆ ಚರ್ಚೆ ಮಾಡಿದ್ದಕ್ಕೆ ಬಹಳ ಪೂರಕವಾಗಿರುವಂಥದ್ದು. ಈಗಾಗಲೇ ನಾನು ಹೇಳಿದಂತೆ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಗೆ run off ಕಡಿಮೆ ಇರುವುದರಿಂದ ಯಾವುದೇ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ, ಈ ಭಾಗದಲ್ಲಿ ಕೆಲವು ತಿಂಗಳಲ್ಲಿ ಕುಡಿಯುವ ನೀರಿನ ಆದಿಯಾಗಿ ಬಹಳ ಸಮಸ್ಯೆ ಇರುವುದರಿಂದ ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ಒಂದು ಸಮಿತಿ ರಚಿಸಿದ್ದೆವು. ಅವರು ಅಲ್ಲಿ small vented dams ಕಟ್ಟಬೇಕೆಂದು ಶಿಫಾರಸು ಮಾಡಿದ್ದಾರೆ. ಆ small vented dams ಅಂದರೆ ಸುಮಾರು ೧೫೦೦ vented dams ಅನ್ನು ೩ ಜಿಲ್ಲೆಗಳು ಅಂದರೆ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಟ್ಟಬೇಕಾಗಿದೆ.ಈಗಾಗಲೇ ಸುಮಾರು ೪೦೦ಕ್ಕಿಂತ ಹೆಚ್ಚು ಈ ತರಹದ damಗಳನ್ನು ಸಣ್ಣ ನೀರಾವರಿಯಲ್ಲಿ ಕೈಗೆತ್ತಿಕೊಂಡಿದ್ದಾರೆ. ಇದನ್ನು ನಮ್ಮ ಇಲಾಖೆಯಿಂದ ಮಾಡಬೇಕೆಂಬ ಒತ್ತಾಯ ಇದ್ದಿದ್ದರಿಂದ ಈ ವರ್ಷದ ಬಜೆಟ್‌ನಲ್ಲಿ ಕೂಡ ಇದನ್ನು ಅನುಮೋದಿಸಿದ್ದರಿಂದ ಇದನ್ನು ತೆಗೆದು-ಕೊಳ್ಳಬೇಕೆಂದು ಶ್ರೀ ಎಸ್. ಯೋಗೀಶ್‌ಭಟ್‌ರವರ ನೇತೃತ್ವದಲ್ಲೇ ಒಂದು ಸಭೆಯನ್ನು ಮೊನ್ನೆಮಾಡಿದ್ದೇವೆ.ಇದಕ್ಕೆ ಎಲ್ಲಾ ರೀತಿಯಲ್ಲಿ, ತ್ವರಿತಗತಿಯಲ್ಲಿ ಈ ಯೋಜನೆಗಳನ್ನು ತೆಗೆದುಕೊಳ್ಳುತ್ತೇವೆ ಮತ್ತು ೪೮೦ vented dams ಹಾಗೂ ಸುಮಾರು ೭೦ಕ್ಕಿಂತ ಹೆಚ್ಚು salt re generation ಗೆ dams ಕಟ್ಟುತ್ತಿದ್ದೇವೆ. ಅದೆಲ್ಲವನ್ನೂ ಕೂಡ ತೆಗೆದುಕೊಳ್ಳಲು ಈಗಾಗಲೇ ಸಿದ್ಧತೆ ಮಾಡಿಕೊಂಡಿದ್ದೇವೆ. ಆದಷ್ಟು ಬೇಗ

ಕಾರ್ಯ ಪ್ರಾರಂಭಿಸುತ್ತೇವೆ ಮತ್ತು ೨ ವರ್ಷಗಳಲ್ಲಿ ಮುಗಿಸುವ ಎಲ್ಲಾ ಕ್ರಿಯಾಶೀಲ ಪ್ರಯತ್ನಗಳನ್ನು ನಾವು ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್:- ಮಾನ್ಯ ಸಚಿವರಿಗೆ ನಾನು ತಮ್ಮ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ.ಇದರಲ್ಲಿ ಪ್ರಮುಖವಾಗಿ ಆಗಬೇಕಾದಂಥದ್ದು ಏಳು ಕಿಂಡಿ ಆಣೆಕಟ್ಟುಗಳು, ೭೪ ಉಪ್ಪು ನೀರು ತಡೆಯುವ project ಗಳು. ಇಷ್ಟನ್ನು ಮಾಡಲಿಕ್ಕೆ ೪೨೩ ಕೋಟಿ ರೂ. ಬೇಕಾಗುತ್ತದೆ. ಇಷ್ಟು ಹಣವನ್ನು ಎರಡು ವರ್ಷಗಳಲ್ಲಿ ಅಂದರೆ ೨೦೧೨-೧೩, ೨೦೧೩-೧೪ರಲ್ಲಿ ಕೊಡಬೇಕಾಗುತ್ತದೆ. ತಕ್ಷಣ ಕಾಮಗಾರಿ ಆರಂಭಿಸಲಿಕ್ಕೆ ಅಂದರೆ ಡಿಸೆಂಬರ್‌ನಿಂದ ಮೇತಿಂಗಳವರೆಗೆ ಮಾತ್ರ ಮಾಡಲಿಕ್ಕೆ ಸಾಧ್ಯ. ನಂತರ ಮಳೆಗಾಲದಲ್ಲಿ ಕೆಲಸ ಮಾಡಲಿಕ್ಕೆ ಆಗುವುದಿಲ್ಲ.ಈ ಎರಡೂ ಋತುಗಳಲ್ಲಿ ಅಂದರೆ ೬-೬ ತಿಂಗಳ ಅವಧಿಯಲ್ಲಿ ಇಷ್ಟು ಆಣೆಕಟ್ಟುಗಳನ್ನು ಕಟ್ಟುವ ನಿಟ್ಟಿನಲ್ಲಿ ಅನುದಾನ ಬಿಡುಗಡೆ ಮಾಡಬೇಕೆಂದು ಮತ್ತು ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಕೇಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:-ಈ ತರಹದ ಯೋಜನೆಗಳಿಗೆ ಸಾಮಾನ್ಯವಾಗಿ ನಾವು ಉಳಿದ ತಿಂಗಳಲ್ಲಿ ಎಲ್ಲಾ planning ಮಾಡಿ, ಈ ೬-೭ ತಿಂಗಳಲ್ಲಿ ಕೆಲಸ ಮಾಡುವುದಕ್ಕೆ ಎಲ್ಲ administrative approval ಕೊಟ್ಟಿರುತ್ತೇವೆ. ಈಗಾಗಲೇ ಈ ಬಜೆಟ್‌ನಲ್ಲಿ ಹಣ ಇಟ್ಟಿರುವುದರಿಂದ provision ಕೂಡ ಮಾಡಿದ್ದೇವೆ ಮತ್ತು ವಾರಾಹಿ ವಲಯಕ್ಕೆ estimate ಮಾಡಿ, approve ಮಾಡಿ ಈ ವರ್ಷವೇ ತೆಗೆದುಕೊಳ್ಳುವುದಕ್ಕೆ ಎಲ್ಲ ಕ್ರಮವನ್ನು ಜರುಗಿಸುತ್ತೇವೆ.